# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 645 |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12–03–2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂ: | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ NH-275 ರಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಆಗಮನ ಮತ್ತು ನಿರ್ಗಮನವನ್ನು ಯಾವ ಸ್ಥಳಗಳಲ್ಲಿ ನಿಗಧಿಗೊಳಿಸಲಾಗಿದೆ (ಮೂಲ ಅನುಮೋದಿತ ನಕ್ಷೆಯನ್ನು ಒದಗಿಸುವುದು; (ಮಾಹಿತಿ ನೀಡುವುದು) | ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ NH-275 ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಹೆದ್ದಾರಿಯಲ್ಲಿ ನಿಗಧಿಗೊಳಿಸಿರುವ ಆಗಮನ ಮತ್ತು ನಿರ್ಗಮನ ಸ್ಥಳಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಬಿಡದಿ, ಮಂಡ್ಯ, ಪಾಂಡವಪುರ ಮತ್ತು ಶ್ರೀರಂಗಪಟ್ಟಣದ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ಒದಗಿಸಿದ್ದ ಆಗಮನ–ನಿರ್ಗಮನ ಸ್ಥಳಗಳನ್ನು ಯಾವ ಮುನ್ಸೂಚನೆ ಇಲ್ಲದೆ ಮುಚ್ಚಲಾಗಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಿಡದಿ, ಮಂಡ್ಯ, ಪಾಂಡವಪುರ ಮತ್ತು ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಪ್ರವೇಶ ನಿರ್ಗಮನ ಸ್ಥಳಗಳನ್ನು ಮುಚ್ಚಲಾಗಿಲ್ಲ.<br><br>NH-275 ರ ಬೆಂಗಳೂರು – ಮೈಸೂರು ವಿಭಾಗದ ಕಿ.ಮೀ. 112+300ರ ತೂಬಿನಕೆರೆ ಬಳಿ ಬೆಂಗಳೂರಿನಿಂದ ಮೈಸೂರು ಕಡೆಗೆ ಸಂಚರಿಸುತ್ತಿರುವ ಭಾರಿ ವಾಹನಗಳು ಟೋಲ್ ಪ್ಲಾಜಾವನ್ನು ಬೈಪಾಸ್ ಮಾಡುವ ಸರ್ವೀಸ್ ರಸ್ತೆಯಲ್ಲಿ ನಿರ್ಗಮಿಸುತ್ತಿದ್ದು, ಇದು ಪಕ್ಕದ ಹಳ್ಳಿಗರು, ಸ್ಥಳೀಯ ಸಂಚಾರ ಮತ್ತು ದ್ವಿಚಕ್ರ ವಾಹನಗಳು ಸಂಚರಿಸಲು ಸುಗಮವಾಗಿರುತ್ತದೆ. ಆದರೆ ಸದರಿ ವಾಹನಗಳ ದಟ್ಟಣೆಯಿಂದ ಸರ್ವೀಸ್ ರಸ್ತೆಯಲ್ಲಿ ರಸ್ತೆ ಸುರಕ್ಷತೆ ಸಮಸ್ಯೆಯನ್ನು ಉಂಟು ಮಾಡಿ ಅಪಘಾತಗಳಿಗೆ ಕಾರಣವಾಗುತ್ತಿವೆ. ಈ ಕಾರಣದಿಂದಾಗಿ ಸದರಿ ಸೇವಾ ರಸ್ತೆಯಲ್ಲಿ ಸಂಚರಿಸುವ ಭಾರಿ ವಾಹನಗಳನ್ನು ನಿಲ್ಲಿಸುವ ಮೂಲಕ ಪಕ್ಕದ ಗ್ರಾಮಸ್ಥರು ಪ್ರತಿಭಟನೆ ನಡೆಸಿರುತ್ತಾರೆ. ಆದ್ದರಿಂದ ರಸ್ತೆ ಸುರಕ್ಷತಾ ಸಮಸ್ಯೆಗಳ ಹಿತದೃಷ್ಟಿಯಿಂದ ಬೆಂಗಳೂರಿನಿಂದ – ಮೈಸೂರು ಕಡೆಗೆ ಪ್ರಯಾಣಿಸುವ ಭಾರಿ ವಾಹನಗಳ ನಿರ್ಗಮನವನ್ನು ಕಿ.ಮೀ. 112+300 (LHS) ರ ತೂಬಿನಕೆರೆ ಬಳಿ ಟೋಲ್ ಬೈಪಾಸ್ ಮಾಡುವ ಸ್ಥಳದಲ್ಲಿ ಟ್ರಕ್‌ಗಳನ್ನು ನಿರ್ಬಂಧಿಸಲಾಗಿದೆ. ಆದರೆ ಇತರೆ ಎಲ್ಲಾ ವಾಹನಗಳು (ಕಾರುಗಳು, ಜೀಪುಗಳು |

| | | |
|---|---|---|
| | | ಇತ್ಯಾದಿ) ಪಾಂಡವಪುರ ಒಳಗೊಂಡಂತೆ ಪಕ್ಕದ ಹಳ್ಳಿಗಳನ್ನು ತಲುಪಲು ಸೇವಾ ರಸ್ತೆಗೆ ಪ್ರವೇಶಿಸಲು ಮತ್ತು ನಿರ್ಗಮಿಸಲು ಅನುಮತಿ ನೀಡಲಾಗಿರುತ್ತದೆ. ಸರ್ವೀಸ್ ರಸ್ತೆಯನ್ನು ಸಂಪೂರ್ಣವಾಗಿ ಮುಚ್ಚಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ನೀಡಿರುತ್ತಾರೆ. |
| ಇ) | ಸದರಿ ಎಕ್ಸ್‌ಪ್ರೆಸ್‌ವೇ NH-275 ರ ಎರಡು ಬದಿ ಸರ್ವೀಸ್ ರಸ್ತೆ ಕಾಮಗಾರಿಗಳು ಮುಗಿದಿದೆಯೇ; ಇಲ್ಲವಾದಲ್ಲಿ ಪೂರ್ಣಗೊಳ್ಳದೆ ಇರಲು ಕಾರಣಗಳೇನು; (ವಿವರ ನೀಡುವುದು) | ವಿನ್ಯಾಸ ಯೋಜನಾ ಒಪ್ಪಂದದ ಪ್ರಕಾರ ಬೆಂಗಳೂರಿನಿಂದ ಮೈಸೂರು NH-275 ರವರೆಗೆ ಸರ್ವೀಸ್ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಈ) | ಎರಡು ಬದಿ ಸರ್ವೀಸ್ ರಸ್ತೆ ಕಾಮಗಾರಿ ಎಲ್ಲೆಲ್ಲಿ ಪ್ರಾರಂಭವಾಗಿದೆ ಹಾಗೂ ಎಲ್ಲೆಲ್ಲಿ ಮುಗಿದಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಎರಡು ಬದಿಯ ಸರ್ವೀಸ್ ರಸ್ತೆಗೆ ಕಾಮಗಾರಿಯ ಪ್ರಾರಂಭ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಿರುವ ವಿವರಗಳನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ಸಲ್ಲಿಸಿದ್ದು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ:ಲೋಇ 95 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

## ANNEXURE-I

| Entry - Exit facilities in Bengaluru to Mysuru NH-275 | | | | |
|---|---|---|---|---|
| Sl. No. | Village Name | Km | Type | Town Name |
| 1 | Sheshagirihalli | 27.250 | Exit | Wonderla |
| 2 | Manchanayakanahalli | 28.550 | Exit | Bidadi |
| 3 | Kenchanakuppe | 36.000 | Exit | Bidadi |
| 4 | Kenchanakuppe | 36.100 | Entry | |
| 5 | Madapura | 41.950 | Exit | Ramanagara |
| 6 | Madapura | 42.100 | Entry | |
| 7 | Maluru | 65.500 | Exit | Channapatna |
| 8 | Maluru | 65.600 | Entry | |
| 9 | Byrapatna | 66.800 | Exit | Channapatna |
| 10 | Byrapatna | 66.900 | Entry | |
| 11 | Nidagatta | 73.650 | Exit | Maddur |
| 12 | Nidagatta | 73.750 | Entry | |
| 13 | Gejjalagere | 84.000 | Exit | Maddur |
| 14 | Gejjalagere | 84.200 | Entry | |
| 15 | Ummadahalli | 94.100 | Exit | Mandya |
| 16 | Ummadahalli | 94.200 | Entry | |
| 17 | Induvalu | 106.050 | Exit | Mandya |
| 18 | Induvalu | 106.150 | Entry | |
| 19 | Yaliyuru | 108.750 | Exit | Tubinakere Industrial Area |
| 20 | Yaliyuru | 108.850 | Entry | |
| 21 | Elechakanahalli | 112.300 | Exit | Tubinakere Industrial Area (Exit facilities restricted for Heavy vehicles) |
| 22 | Elechakanahalli | 112.400 | Entry | |
| 23 | K.Shettihalli | 121.100 | Exit | Srirangapatna |
| 24 | K.Shettihalli | 121.200 | Entry | |
| 25 | Brahmapura | 130.800 | Exit | Srirangapatna |
| 26 | Brahmapura | 130.900 | Entry | |
| Mysuru | | | | |

| Entry - Exit facilities in Mysuru to Bengaluru NH-275 | | | | |
|---|---|---|---|---|
| Sl. No. | Village Name | NH Chainage, Km | Type | Town Name |
| 1 | Brahmapura | 131.000 | Exit | Srirangapatna |
| 2 | Brahmapura | 130.900 | Entry | |
| 3 | K.Shettihalli | 121.200 | Entry | Srirangapatna |
| 4 | Ragimuddenahalli | 113.500 | Exit | Tubinakere Industrial Area |
| 5 | Yaliyuru | 108.800 | Exit | Tubinakere Industrial Area |
| 6 | Yaliyuru | 108.700 | Entry | |
| 7 | Induvalu | 106.150 | Exit | Mandya |
| 8 | Induvalu | 106.050 | Entry | |
| 9 | Ummadahalli | 93.800 | Exit | Mandya |

(1)

| | | | | |
|---|---|---|---|---|
| **10** | Ummadahalli | 93.650 | Entry | |
| **11** | Gejjalagere | 84.200 | Exit | Maddur |
| **12** | Gejjalagere | 84.000 | Entry | |
| **13** | Nidagatta | 73.650 | Exit | Maddur |
| **14** | Nidagatta | 73.550 | Entry | |
| **15** | Byrapatna | 66.800 | Exit | Channapatna |
| **16** | Byrapatna | 66.700 | Entry | |
| **17** | Maluru | 65.600 | Exit | Channapatna |
| **18** | Maluru | 65.450 | Entry | |
| **19** | Madapura | 42.050 | Exit | Ramanagara |
| **20** | Madapura | 41.850 | Entry | |
| **21** | Kenchanakuppe | 36.000 | Exit | Bidadi |
| **22** | Kenchanakuppe | 35.900 | Entry | |
| **23** | Lakshmisagara | 28.950 | Entry | Bidadi |
| | **Bengaluru** | | | |